ಅವನನ್ನು ಅನುನಯಗೊಳಿಸಬೇಕು. ಅದಕ್ಕಾಗಿ ನಿಮ್ಮ ಕನ್ಯತ್ವ ಕರಗಿಹೋಗುವುದೆಂಬ ಭಯ ಬೇಡ. ಅದಕ್ಕಾಗಿ ತಕ್ಕ ಪರಿಹಾರವನ್ನೂ ನೀಡಲಾಗುವುದು' ಎಂದು ಎಲ್ಲರನ್ನೂ ಉದ್ದೀಪನಗೊಳಿಸಿದೆ. ಅವತ್ತಿಗೆ ಎಲ್ಲವನ್ನೂ ಕೇಳಿಕೊಂಡು ಸುಮ್ಮನಾಗಿಬಿಡುವ ಅಪಾಯ ಇದ್ದುದರಿಂದ ಆಗಾಗ್ಗೆ ಅವರ ಮೋಹ ಪರವಶತೆಯನ್ನು ನೆನಪು ಮಾಡುತ್ತಿರುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಿದೆ. ಯಾವಾಗ ಈ ಎಲ್ಲ ಪ್ರಯತ್ನಗಳೂ ವಿಫಲಗೊಂಡವೋ ಆಗ ಉದಯನನನ್ನು ಬರಹೇಳಿದೆ. ರಾಜಕುಮಾರ ಈ ಯಾವ ಆಕರ್ಷಣೆಗಳಿಗೂ ಮಣಿಯುತ್ತಿಲ್ಲವೆಂದು ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದ. ಈ ಇಂಥ ವೈರಾಗ್ಯ ಭಾವನೆಗಳನ್ನು ನೋಡಿದ ಪ್ರಜಾಪತಿದೇವಿಯೇ ಮದುವೆ ಪ್ರಸ್ತಾಪವನ್ನು ಮುಂದಿಟ್ಟಳು. ಒಂದೊಂದೇ ಹೆಣ್ಣು ನೋಡಲು ಅಲ್ಲಲ್ಲಿಗೆ ಅಲೆಯುತ್ತ ಕಾಲ ವ್ಯಯ ಮಾಡುವ ಬದಲು ಅವರೆಲ್ಲರನ್ನೂ ಯಾವುದಾದರೊಂದು ನೆಪದಲ್ಲಿ ಇಲ್ಲಿಗೇ ಕರೆಸಿಕೊಂಡು, ಆದಷ್ಟು ಬೇಗ ಮಗನನ್ನು ವಿವಾಹ ಬಂಧನದಲ್ಲಿ ಬೆಸೆದುಬಿಡಲು ಆಕೆಯಾದರೂ ಅವಸರಿಸಿದಳು.

ಅವಳ ಅಭಿಲಾಷೆಯಂತೆಯೇ ಅಕ್ಕಪಕ್ಕದ ಹತ್ತಾರು ಪ್ರಾಂತ್ಯಗಳಿಗೆ ಓಲೆ ಕಳುಹಿಸಲಾಯಿತು. ಅನೇಕರಿಗೆ ಸಿದ್ಧಾರ್ಥ ಗೌತಮನ ಭವಿಷ್ಯವಾಣಿ ತಿಳಿದಿದ್ದರಿಂದ ಹೆಣ್ಣುಗಳನ್ನು ಕೊಡಲು ಮುಂದೆ ಬಾರದಿದ್ದರೆ ಎಂಬ ಅಳುಕಿನಿಂದಲೇ ಎರಡನೇ ಮತ್ತು ಮೂರನೇ ಹಂತದ ಕುಟುಂಬಗಳನ್ನೂ ಆಹ್ವಾನಿಸಲಾಗಿತ್ತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಏಳೆಂಟು ಪ್ರಾಂತ್ಯಾಧಿಕಾರಿಗಳು ನಮ್ಮ ಸಂಬಂಧವನ್ನು ಬಯಸಿ ತಮ್ಮ ತಮ್ಮ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಆದ್ದರಿಂದಾಗಿ ಮೊದಲನೇ ಪ್ರಾಶಸ್ತ್ಯವನ್ನು ಅವರ ಮಕ್ಕಳಿಗೇ ನೀಡಲಾಯಿತು. ದೂರದೂರುಗಳಿಂದ ಬಂದವರನ್ನು ಬರಿಗೈಯಲ್ಲಿ ಕಳಿಸಬಾರದೆಂದು ಅವರವರ ಯೋಗ್ಯಾತಾನುಸಾರ ಉಡುಗೊರೆಗಳನ್ನು ಸಿದ್ಧಾರ್ಥನಿಂದಲೇ ಕೊಡಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಪರಪ್ರಾಂತ್ಯದ ವಧುಗಳೆಲ್ಲರ ಪ್ರದರ್ಶನ, ಸಂದರ್ಶನ ಮುಗಿದರೂ ಯಾರೊಬ್ಬರೂ ಸಿದ್ಧಾರ್ಥನ ಮನಸ್ಸನ್ನು ಕದಿಯುವಲ್ಲಿ ಯಶಸ್ವಿಯಾಗಲಿಲ್ಲ. ಕೊನೆಗೆ ನಮ್ಮದೇ ಪ್ರಾಂತ್ಯದ ಯಾರಾದರೂ ಮುಂದೆ ಬರಬಹುದೆಂಬ ಆಯ್ಕೆಯನ್ನು ಮುಂದಿಡಲಾಯಿತು. ಸಾಮಾನ್ಯ ವಂಶದ ಹುಡುಗಿಯರಿಂದ ಹಿಡಿದು ಕ್ಷತ್ರಿಯರ, ವೈಶ್ಯರ ಕನ್ಯೆಯರೆಲ್ಲರೂ ಸಿದ್ಧಾರ್ಥನ ಕುಡಿನೋಟ ತಮ್ಮ ಮೇಲೇನಾದರೂ ಬಿದ್ದರೆ ಅದೃಷ್ಟ ಖುಲಾಯಿಸಬಹುದೆಂದು ಬಂದಿದ್ದರು. ಊಹೂಂ. ಯಾರೂ ಸಿದ್ಧಾರ್ಥನನ್ನು ಸೆಳೆಯುವಲ್ಲಿ ಸಫಲರಾಗಲಿಲ್ಲ.

ಪ್ರಜಾಪತಿದೇವಿ ಗೌತಮಿ ನಿರಾಸೆಯಿಂದ, 'ಇನ್ನೆಂಥ ಹುಡುಗಿ ಬೇಕೋ ನಿನಗೆ? ಭೂಮಿ ಮೇಲಿರುವ ಹುಡುಗಿಯರು ಯಾರೂ ನಿನಗೆ ಇಷ್ಟವಿಲ್ಲವೆಂದಾದರೆ ಆದೇಶ ಕೊಟ್ಟು ತಯಾರಿಸಬೇಕಾಗುತ್ತದೆ' ಎಂದು ಚುಡಾಯಿಸುತ್ತಿದ್ದಳು. ಆ ನಗುವಿನ ಅಲೆಗೆ ನಾನೂ ಕಿವಿಯಾದೆ. ಅಷ್ಟರಲ್ಲಿ ಉಡುಗೊರೆಗಳು ಖಾಲಿಯಾದರೂ ಹುಡುಗಿಯರಿನ್ನೂ ಉಳಿದಿದ್ದರಿಂದ ಉಡುಗೊರೆಯ ಬುಟ್ಟಿಯನ್ನು ತುಂಬಲು ತಂಗಿ ಪಮಿತಾಳ ಮಗಳು ಯಶೋಧರೆ ಬಂದಳು. ಆಕೆಯನ್ನು ನೋಡಿ, 'ಒಬ್ಬರೂ ನಮ್ಮ ಯಶೋಧರೆಯಷ್ಟು ಲಕ್ಷಣವಾಗಿಲ್ಲ. ಅಂಥವರನ್ನು ಮದುವೆಯಾಗಲು ಸಾಧ್ಯವೇ?' ಎಂದು ಆತನೂ ಕಿಚಾಯಿಸಿದ. ಅಲ್ಲೇ ಇದ್ದ ಪಮಿತಾ ಅದನ್ನು ಕೇಳಿಸಿಕೊಂಡು, 'ಹಾಗಾದರೆ ಯಶೋಧರೆಯನ್ನೇ ಮದುವೆಯಾಗಿಬಿಡು' ಎಂದಳು. ಮಾತಿಗೆ ಸಿಕ್ಕಿಹಾಕಿಕೊಂಡ ಸಿದ್ಧಾರ್ಥ ಕೊಸರಾಡುತ್ತ ತಲೆತಗ್ಗಿಸಿ ಎದ್ದುಹೋದ. ಆದರೆ ಪಮಿತಾ ಅಷ್ಟಕ್ಕೇ ಬಿಡಲಿಲ್ಲ. ರಾತ್ರಿ ಊಟವಾದ ಮೇಲೆ ಮತ್ತೆ ಪ್ರಸ್ತಾಪಿಸಿದಳು. ಆಕೆಗೇನೋ ತನ್ನ ಮಗಳು ಇನ್ನೆಲ್ಲೋ ಅಪರಿಚಿತರ ಮನೆ ಸೇರದೆ ಅಣ್ಣನ ಮನೆಯನ್ನೇ ಸೇರುತ್ತಾಳಲ್ಲ ಎಂಬ ಬಗ್ಗೆ ಅಪರಿಮಿತ ಸಂತಸವಿತ್ತು. ಆದರೆ ತಂಗಿಯ ಗಂಡನೆಂಬ ಕಾರಣಕ್ಕೆ ಮಂತ್ರಿಯನ್ನಾಗಿಸಿಕೊಂಡು ದಂಡಪಾಣಿಯ ಹುದ್ದೆ ನೀಡಿದ್ದ ಸುಪ್ರಬುದ್ಧನಿಗೆ ಇದು ಎಳ್ಳಷ್ಟೂ ಇಷ್ಟವಿರಲಿಲ್ಲ.

ಸಿದ್ಧಾರ್ಥನಿಗೆ ಭೌತಿಕ ಜಗತ್ತಿನ ಬಗ್ಗೆ, ರಾಜ್ಯಾಡಳಿತದ ಬಗ್ಗೆ ಆಸಕ್ತಿಯೇ ಇಲ್ಲದೆ ಅನ್ಯಮನಸ್ಕನಾಗಿರುವುದರಿಂದ ಅಂಥವನಿಗೆ ಮಗಳನ್ನು ಕೊಡುವುದೇ ಎಂದು ಆಕ್ಷೇಪಣೆ ತೆಗೆದ. ಆತನ ಮಾತೂ ಸತ್ಯವೇ ಎಂದು ನನಗೂ ಅನ್ನಿಸದಿರಲಿಲ್ಲ. ಆದರೆ ಇದರಿಂದ ಅವಮಾನಿತನಾದ ಸಿದ್ಧಾರ್ಥ, 'ನಿಮ್ಮ ಮಗಳನ್ನು ವರಿಸಲು ಎಂಥ ಪರೀಕ್ಷೆಯಲ್ಲಿ ಗೆಲ್ಲಬೇಕು ಹೇಳಿ' ಎಂದು ಸವಾಲು ಹಾಕಿದ. ನನಗೋ ಒಳಗೇ ಸಂಭ್ರಮ. ನಾನೂ ದನಿಗೂಡಿಸಿದೆ. 'ಏನು, ಸ್ವಯಂವರ ಏರ್ಪಡಿಸುವೆಯಾ, ಏರ್ಪಡಿಸು' ಎಂದು ಸವಾಲು ಹಾಕಿದೆ. 'ರಾಜ್ಯದ ಸಂರಕ್ಷಣೆಗೆ ಇರಬೇಕಾದ ಬಿಲ್ವಿದ್ಯೆ, ಕತ್ತಿವರಸೆ, ಕುದುರೆ ಸವಾರಿಗಳಲ್ಲಿ ಯಾರು ಕಲಿಗಳಿರುತ್ತಾರೋ, ಅಂಥವರಿಗೆ ಮಾತ್ರ ತನ್ನ ಮಗಳನ್ನು ಕೊಡುವುದು' ಎಂದುಬಿಟ್ಟ. ಅಂದರೆ ಸಿದ್ಧಾರ್ಥ ಕಲಿಯಲ್ಲವೆಂದು ಅವನು ನಿರ್ಣಯಿಸಿಬಿಟ್ಟನೇ? ನನಗೂ ಸಿಟ್ಟು ಬಂತು.

ಸ್ವಯಂವರದ ಸಿದ್ಧತೆಗಳು ಏರ್ಪಟ್ಟೇ ಬಿಟ್ಟಿತು. ನಾನು ಕಳಿಸಿದ್ದಕ್ಕಿಂತ ಹೆಚ್ಚು ಪ್ರಾಂತ್ಯಗಳಿಗೆ ವರ್ತಮಾನ ಕಳಿಸಿದ. ಎಷ್ಟಾದರೂ ಆತ ನನ್ನಂತೇನೂ ಪ್ರಾಂತ್ಯಾಧಿಕಾರಿ ಅಲ್ಲವಲ್ಲ. ಹಾಗಾಗಿ ಅಲ್ಪಸ್ವಲ್ಪ ಅನುಕೂಲಸ್ಥರಿಗೆಲ್ಲ ಆಮಂತ್ರಣ ಕಳಿಸಿದ. ಆತನ ಉದ್ದೇಶ, ಆರ್ಥಿಕವಾಗಿ ಸುಭದ್ರರಾಗಿರುವುದಕ್ಕಿಂತ ದೈಹಿಕವಾಗಿ ಸುಭದ್ರರಾಗಿರುವವರಿಗೆ ತನ್ನ ಮಗಳನ್ನು ಕೊಡುತ್ತೇನೆಂದು ನನ್ನ ಮುಂದೆ ಸಾಬೀತು ಮಾಡಬೇಕಾಗಿತ್ತು. ವಿಶಾಲವಾದ ಬಯಲಿನ ಸುತ್ತ ನೆರೆದ ಜನರು ನೋಡಲೆಂದು ಎತ್ತರದ ಏರಿಯನ್ನೂ ಹಾಕಿಸಿದ್ದ. ನಿರೀಕ್ಷೆಯಂತೆಯೇ ದೊಡ್ಡ ಸ್ಪರ್ಧೆ ಏರ್ಪಟ್ಟಿತು. ನೂರಾರು ಸಂಖ್ಯೆಯಲ್ಲಿ ಯುವಕರು ಪಾಲ್ಗೊಂಡರು. ಅದೊಂದು ಕ್ರೀಡಾಕೂಟವೆಂಬಂತೆ ಮನರಂಜನೆ ಪಡೆಯಲು ಪ್ರೇಕ್ಷಕರೂ ನೆರೆದುಬಿಟ್ಟರು. ಅಷ್ಟೊಂದು ಯುವಕರಲ್ಲಿ ಅಂತಿಮ ಸುತ್ತಿಗೆ ಎಂಟು–ಹತ್ತು ಜನರನ್ನು ಆಯ್ಕೆಮಾಡಲು ಒಂದು ವಾರ ಕಾಲವೇ ಹಿಡಿಯಿತು. ಸಿದ್ಧಾರ್ಥನಿಗೆ ಅಂತಿಮ ಸುತ್ತಿನವರೆಗೆ ಭಾಗವಹಿಸದಿರುವಂತೆ ನಾನೇ ಸೂಚಿಸಿದ್ದೆ. ಎಂತೆಂಥ ಘಟಾನುಘಟಿಗಳು ಬರುತ್ತಾರೋ ನೋಡಿಯೇಬಿಡೋಣ ಎಂದು ನಾನೂ ಪಂಥಾಹ್ವಾನ ನೀಡಿದ್ದೆ. ಅಷ್ಟೂ ದಿನ, ನನ್ನ ಕೈಕೆಳಗಿನ ದಂಡಪಾಣಿಯಾಗಿದ್ದರೂ ಸುಪ್ರಬುದ್ಧ ನನ್ನನ್ನು ನೋಡಲು, ಮಾತನಾಡಿಸಲು ಬರಲೇ ಇಲ್ಲ. ಆಂತರಿಕ ಮತ್ತು ಬಾಹ್ಯ ಆಡಳಿತ ಸುಭದ್ರವಾಗಿದ್ದರಿಂದ ನಾನೂ ಆತಂಕಪಟ್ಟುಕೊಳ್ಳುವ ಪ್ರಮೇಯ ಇರಲಿಲ್ಲ. ಆ ಹತ್ತಾರು ಹುಡುಗರಲ್ಲಿ ದೇವದತ್ತನೇ ಮೊದಲಿಗನಾಗಿ ಬರುತ್ತಿದ್ದ. ಆದರೇನು? ಆತ ನನ್ನ ಇನ್ನೊಬ್ಬ ತಂಗಿ ಅಮಿತಾಳ ಮಗನಾದ್ದರಿಂದ ವರಸೆಯಲ್ಲಿ ಯಶೋಧರೆಗೆ ಅಣ್ಣನಾಗಬೇಕಾಗಿದ್ದರಿಂದ ಆತ ಮದುವೆಯಾಗುವಂತಿರಲಿಲ್ಲ. ಆದರೆ ಎಲ್ಲ ಸ್ಪರ್ಧಿಗಳನ್ನು ಎದುರಿಸಲು ಆತನ ಸ್ಪರ್ಧೆ ಅವಶ್ಯವಾಗಿತ್ತು.

ದೇವದತ್ತ ಬಿಲ್ವಿದ್ಯೆಯಲ್ಲಿ ಎಲ್ಲರಿಗಿಂತ ಹೆಚ್ಚು ನಿಖರವಾಗಿ ಬಾಣವನ್ನು ಗುರಿಯಲ್ಲಿ ನಾಟಿಸಿದ. ಇನ್ನೂ ಸಿದ್ಧಾರ್ಥನ ಪಾಳಿ ಬಂದೇಯಿಲ್ಲ, ಆಗಲೇ ದೇವದತ್ತ ಗೆದ್ದುಬಿಟ್ಟನೆಂದು ಜನರೆಲ್ಲ ಹೋ... ಕಾರ ಎಬ್ಬಿಸಿದರು. ಆಗ ನಾನು ಸಿದ್ಧಾರ್ಥನಿಗೆ ಎದ್ದುಹೋಗಲು ಸೂಚನೆ ಕೊಟ್ಟೆ. ಪಮಿತಾಳ ಮುಖ ಆನಂದತುಂದಿಲಿತವಾದರೆ ಸುಪ್ರಬುದ್ಧನ ಮುಖ ವಿವಶವಾಯಿತು. ಇದುವರೆಗೂ ಸ್ಪರ್ಧೆಯಲ್ಲಿಲ್ಲದೆ ಈಗ ಏಕಾಏಕಿ ಸೇರ್ಪಡೆಗೊಳ್ಳುವುದು ಸ್ಪರ್ಧಾ ನಿಯಮಕ್ಕೆ ವಿರುದ್ಧವೆಂದ. ನಾನು ಎದ್ದು ನಿಂತು, 'ಪ್ರಾಂತ್ಯಾಧಿಕಾರಿಗೆ ತನ್ನ ವಿವೇಚನೆಯನ್ನು ಬಳಸುವಷ್ಟೂ ಅಧಿಕಾರವಿಲ್ಲವೇ?' ಎಂದೆ. ನಿರುತ್ತರನಾದ. ಕ್ರೀಡಾಂಗಣದೊಳಕ್ಕೆ ಸಿದ್ಧಾರ್ಥ ಆಗಮಿಸುತ್ತಿದ್ದಂತೆಯೇ ಒಂದು ನರಪಿಳ್ಳೆಯೂ ಸದ್ದು ತೆಗೆಯದೇ ನಿಶ್ಶಬ್ದವಾಗಿತ್ತು. ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟು, ಬಾಯಿ ಬಿಟ್ಟುಕೊಂಡು ಮುಂದೇನಾಗುವುದೋ ಎಂದು ತವಕದಿಂದ ಕಾದು ಕುಳಿತಿದ್ದರು. ರಾಜ ಪರಿವಾರದ ಜೊತೆ ಸುಪ್ರಬುದ್ಧ ಕುಳಿತಿದ್ದರೂ ಆತಂಕದಿಂದ ಆತ ಎದ್ದೂ ಎದ್ದು ಕೂರುತ್ತಿದ್ದ. ಪಮಿತಾ ಮಾತ್ರ ಸಿದ್ಧಾರ್ಥನೇ ಗೆಲ್ಲಲಿ ಎಂದು ಪ್ರಾರ್ಥನೆ ಮಾಡುತ್ತಿದ್ದಳು. ಸಿದ್ಧಾರ್ಥನೂ ಆ ಗುರಿಯನ್ನೇ ಭೇದಿಸಬಹುದೇ ವಿನಾ ಅದಕ್ಕಿಂತಲೂ ಇನ್ನೇನು ತಾನೇ ಮಾಡಲು ಸಾಧ್ಯ ಎಂದು ನಾನಾದರೂ ಕಾತರದಿಂದ ಕಾಯುತ್ತಿದ್ದೆ. ಆಮೇಲೆ ಸುಪ್ರಬುದ್ಧ ಮೊದಲು ಗುರಿಯಿಟ್ಟವರೇ ಸ್ಪರ್ಧೆಯಲ್ಲಿ ಗೆದ್ದಂತೆ ಎಂದುಬಿಟ್ಟರೆ ಏನು ಮಾಡುವುದು?

ಅಂಗಳದೊಳಕ್ಕೆ ಹೋದ ಸಿದ್ಧಾರ್ಥ, ದೇವದತ್ತ ಹೊಡೆದಿದ್ದ ಗುರಿಯ ನಡುವಿನ ಅಂತರವನ್ನು ಅಳತೆ ಮಾಡಿ, ಅದರ ಎರಡರಷ್ಟು ದೂರಕ್ಕೆ ಗುರುತು ಮಾಡಿಸಿದ. ಅಲ್ಲಿಂದ ಗುರಿಗೆ ಗುರಿಯಿಟ್ಟ. ಆದರೇನು, ಆತ ಎಳೆದ